ಮೈಸೂರು ಜಿಲ್ಲೆಯಲ್ಲಿರುವ ಪ್ರೌಢ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಬಿಡುಗಡೆಯಾಗಿರುವ ಅನುದಾನ

338 (5) ಶ್ರೀ ಸತ್ಯನಾರಾಯಣ ಎಂ (ಚಾಮುಂಡೇಶ್ವರಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ ಕಳೆದೆರಡು ವರ್ಷಗಳಿಂದ ಮಂಜೂರಾದ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳೆಷ್ಟು (ವಿವರ ನೀಡುವುದು);

ಆ) ಮಂಜೂರಾಗಿದ್ದಲ್ಲಿ ಈ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಕಟ್ಟಡಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಯಾವ ನಿಯಮಾವಳಿಗಳನ್ನು ಅನುಸರಿಸಲಾಗುವುದು;

ಉ) ಮೈಸೂರು ತಾಲ್ಲೂಕು ಇಲವಾಲ ಗ್ರಾಮದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಹೊಸದಾಗಿ ವಾಣಿಜ್ಯ ವಿಭಾಗ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕಳೆದೆರಡು ಸಾಲಿನಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿರುವುದಿಲ್ಲ.

14 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದೆ. (ವಿವರವನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಪ್ರೌಢಶಾಲೆ – ಪ್ರಶ್ನೆ ಉದ್ಭವಿಸುವುದಿಲ್ಲ.

ಪದವಿ ಪೂರ್ವ ಕಾಲೇಜು– ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) 2010–11ನೇ ಸಾಲಿನಲ್ಲಿ ಪ್ರಾರಂಭಿಸಲು ಪರಿಗಣಿಸಲಾಗುವುದು.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ– 18ನೇ ಅಡ್ಡರಸ್ತೆ, ಬೆಂಗಳೂರು–12

ಮೈಸೂರು ಜಿಲ್ಲೆಗೆ 2007–08ನೇ ಸಾಲಿನಲ್ಲಿ ಮಂಜೂರಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅನುಮೋದನೆ ಆಗಿರುವ ಕಟ್ಟಡ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ತಾಲ್ಲೂಕು	ಕ್ರ. ಸಂ.	ಸರ್ಕಾರಿ ಸಮೂ ಕಾಲೇಜು ಮಂಜೂರಾಗಿರುವ ಸ್ಥಳ	ಆರ್‌ಐಡಿಎಫ್–13		ಆರ್‌ಐಡಿಎಫ್–14		ಆರ್‌ಐಡಿಎಫ್–15	
			ಕೊಠಡಿಗಳ ಸಂಖ್ಯೆ	ಮೊತ್ತ	ಕೊಠಡಿಗಳ ಸಂಖ್ಯೆ	ಮೊತ್ತ	ಕೊಠಡಿಗಳ ಸಂಖ್ಯೆ	ಮೊತ್ತ
1	2	3	4	5	6	7	8	9
ನಂಜನಗೂಡು	1.	ಕೌರ್ಯ, ಕೌಲಂದೆ ಹೋಬಳಿ	3	22.67	—	—	—	—
ಟಿ. ನರಸೀಪುರ	2.	ಮುಸುವಿನಕೊಪ್ಪಲು	—	—	2	15.94	—	—
	3.	ಹಲಗನಹಳ್ಳಿ	ಹೊಸ ಕಟ್ಟಡ	54.08	—	—	—	—
	4.	ಹಾರನಹಳ್ಳಿ	—	—	—	—	2	16.30
ಹೆಚ್‌ಡಿ ಕೋಟೆ	5.	ದೀಚನಹಳ್ಳಿ	2	15.12	—	—	—	—
	6.	ಬಿ ಮಟಗೇರಿ	2	15.12	—	—	—	—
	7.	ಆಂತರಸಂತ	2	15.12	—	—	—	—
ಮೈಸೂರು	8.	ಕಂದಾರಕೊಪ್ಪಲು	—	—	2	15.94	—	—
ಕೆ ಆರ್ ನಗರ	9.	ಹೆಬ್ಬಾಳು	2	15.12	—	—	—	—
	10.	ಗಂಧನಹಳ್ಳಿ	—	—	2	15.94	2	16.30
	11.	ಹೊಸೂರು	—	—	—	—	2	16.30
ಹುಣಸೂರು	12	ಬನ್ನಿಕುಪ್ಪೆ	2	15.12	—	—	2	16.30
	13.	ರತ್ನಗಿರಿ	2	15.12	—	—	—	—
	14.	ಗರಸನಹಳ್ಳಿ ಕೊಮ್ಮೇಗೌಡನ ಕೊಪ್ಪಲು	—	—	2	15.94	—	—
ಒಟ್ಟು				167.47		63.76		65.2